## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.40/2026**

**ಪಿರ್ಯಾದಿ** : ಕರ್ನಾಟಕ ಸರ್ಕಾರ
ಗೋಣಿಕೊಪ್ಪ ಪೋಲೀಸ್.

**ವಿರುದ್ಧ**

**ಆರೋಪಿ:**

1. ಶ್ರೀ ಶಮೀರ್ ಆರ್ ಕರಣ್ಣಾಡೆ,
ತಂದೆಃ ರಜಕ್,
ಪ್ರಾಯಃ 42 ವರ್ಷ,
ವಾಸಃ ಡಿಜೆ ಆಪರೇಟರ್, ವಡಕಾಂಚೇರಿ,
ಪಾಲಕ್ಕಾಡ್, ಕೇರಳ – 678 683.

2. ಶ್ರೀ ನವೀದ್,
ತಂದೆಃ ನಜೀರ್,
ಪ್ರಾಯಃ 32 ವರ್ಷ,
ಡಿಜೆ ವಾಹನದ ಮಾಲೀಕರು,
ವಡಕಾಂಚೇರಿ,
ಪಾಲಕ್ಕಾಡ್, ಕೇರಳ – 678 683.

**ಆರೋಪಣೆ**

*ಶ್ರೀ ಶ್ರೀನಾಥ್ ಎ, ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಯಾದ ನಾನು ಆರೋಪಿಯಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ*

ದಿನಾಂಕ 02/03-10.2025 ರಂದು ಗೋಣಿಕೊಪ್ಪ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಗೋಣಿಕೊಪ್ಪ ನಗರದಲ್ಲಿ ಪ್ರತಿ ವರ್ಷದಂತೆ 2025 ನೇ ಸಾಲಿನ ಕಾವೇರಿ ದಸರಾ ದಶಮಂಟಪಗಳ ಶೋಭಯಾತ್ರೆ ಕಾರ್ಯಕ್ರಮವು ಜರುಗಿದ್ದು, 1ನೇ ಮತ್ತು 2ನೇ ಆರೋಪಿಗಳಾದ ನೀವು ಕೆಎಲ್.10.ಎಸ್.8832ರ ಈಚರ್ ಮಿನಿ ಲಾರಿಯಲ್ಲಿ ಧ್ವನಿವರ್ಧಕದೊಂದಿಗೆ ಗೋಣಿಕೊಪ್ಪ ನಗರದಲ್ಲಿ ಹೆಚ್ಚು ಶಬ್ದವನ್ನುಂಟು ಮಾಡುವ ಡಿಜೆ / ಧ್ವನಿವರ್ಧಕದ ಮೂಲಕ ಜೋರಾದ ಶಬ್ದದಲ್ಲಿ ಹಾಡನ್ನು ಹಾಕಿ ಸಾರ್ವಜನಿಕ ಸುವ್ಯವಸ್ಥೆಗೆ ತೊಂದರೆಯನ್ನುಂಟು ಮಾಡಿ ನಗರದ ಸುತ್ತಮುತ್ತ ವಾಸಿಸುವ ಜನರಿಗೆ ಕಿರಿಕಿರಿ ಹಾಗೂ ಅಡಚಣೆ ಉಂಟು ಮಾಡಿರುವುದು ಹಾಗೂ ಶಬ್ದಮಾಲಿನ್ಯವನ್ನು ಉಂಟು ಮಾಡಿರುವ ಕಾರಣ ಕರ್ನಾಟಕ ಪೋಲೀಸ್ ಕಾಯ್ದೆ ಕಲಂ 37 ಸಹವಾಚಕ 109 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ 1ನೇ ಮತ್ತು 2ನೇ ಆರೋಪಿಗಳಾದ ನೀವುಗಳು ಬಂದೋಬಸ್ತ್ ಕರ್ತವ್ಯದಲ್ಲಿದ್ದ ಪೋಲೀಸ್ ಅಧಿಕಾರಿಗಳು ಧ್ವನಿವರ್ಧಕವನ್ನು ಬಂದ್ ಮಾಡುವಂತೆ ನೀಡಿದ ಸೂಚನೆಗಳನ್ನು ಪಾಲಿಸದೇ ಸ್ನೇಹಿತರ ಬಳಗ

ದಸರಾ ಸಮಿತಿ, ಗೋಣಿಕೊಪ್ಪ ಮಂಟಪದ ಮೆರವಣಿಗೆಗೆ ಪೋಲೀಸ್ ಇಲಾಖೆಯಿಂದ ನೀಡಲಾಗಿದ್ದ ಧ್ವನಿವರ್ಧಕ ಪರವಾನಗಿಯ ಷರತ್ತುಗಳನ್ನು ಉಲ್ಲಂಘನೆ ಮಾಡಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 179(1) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

6.3.26.

**ದಿನಾಂಕ 06.03.2026.**
**ಸ್ಥಳ: ಪೊನ್ನಂಪೇಟೆ.**

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರದನ್ಯಾದಂ,ಪೊನ್ನಂಪೇಟೆ.**

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.40/2026**

| | | |
|---|---|---|
| **ಪಿರ್ಯಾದಿ** | : | ಕರ್ನಾಟಕ ಸರ್ಕಾರ,<br>ಗೋಣಿಕೊಪ್ಪ ಪೋಲೀಸ್, |
| | | ವಿರುದ್ಧ |
| **ಆರೋಪಿ** | :1. | ಶ್ರೀ ಶಮೀರ್ ಆರ್ ಕರಣ್ಕಾಡೆ, |

**ಭಾ.ನ್ಯಾ.ಸು.ಸಂಹಿತೆ ಕಲಂ 275 ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತ ನೀಡಿದ ಉತ್ತರಗಳನ್ನು ನನ್ನಿಂದ ದಿ:06.03.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

[signature] 6.3.26.

**ದಿನಾಂಕ: 06.03.2026**
**ಮತ್ತು ಸ್ಥಳ: ವೊನ್ನಂವೇಟೆ**

ಸಿವಿಲ್ ನ್ಯಾಯಾಧೀಶರು
ಪ್ರದನ್ಯಾದಂ, ವೊನ್ನಂವೇಟೆ

[signature]

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.40/2026**

**ಪಿರ್ಯಾದಿ** : ಕರ್ನಾಟಕ ಸರ್ಕಾರ,
ಗೋಣಿಕೊಪ್ಪ ಪೋಲೀಸ್.

ವಿರುದ್ಧ

**ಆರೋಪಿ** :2. ಶ್ರೀ ನವೀದ್,

**ಭಾ.ನ್ಯಾ.ಸು.ಸಂಹಿತೆ ಕಲಂ 275 ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತ ನೀಡಿದ ಉತ್ತರಗಳನ್ನು ನನ್ನಿಂದ ದಿ:06.03.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

6.3.26.

ಸಿವಿಲ್ ನ್ಯಾಯಾಧೀಶರು
ಪ್ರದನ್ಯಾದಂ, ಪೊನ್ನಂಪೇಟೆ

**ದಿನಾಂಕ:** 06.03.2026
**ಮತ್ತು ಸ್ಥಳ:** ಪೊನ್ನಂಪೇಟೆ